2) ಹೌದು. ಅವುಗಳೆಂದರೆ

ಮಾರ್ಗಗಳು:

1) ರಾಜೀವಗಾಂಧಿ ರಸ್ತೆ

2) ಶ್ರೀ ಬಸವೇಶ್ವರ ರಸ್ತೆ

3) ರಾಣಾ ಪ್ರತಾಪಸಿಂಗ್ ರಸ್ತೆ

4) ಪಥೆ ಔರಂಗಜೇಬ ರಸ್ತೆ

5) ಬಾಬು ಜಗಜೀವನರಾಮ್ ರಸ್ತೆ

ವಿಷಯ:- ಕೈಮಗ್ಗ ಅಭಿವೃದ್ಧಿ ನಿಗಮದ ವಿಷಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 173 (46)

ಶ್ರೀ ಬಸವನಗೌಡ ರಾ.ಪಾಟೀಲ್ (ವಿಜಾಪುರ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಕುರಿತು ಒತ್ತಾಯಿಸಿ ಕೈಮಗ್ಗ ಅಭಿವೃದ್ಧಿ ನಿಗಮದ ನೌಕರರು ನಡೆಸುತ್ತಿರುವ ಹೋರಾಟ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕುರಿತು ಸರ್ಕಾರದವರ ನಿಲುವೇನು?

ಇ) ಈ ಹೋರಾಟದಲ್ಲಿ ಭಾಗವಹಿಸಿದ್ದ ನೌಕರರ ಬಗ್ಗೆ ಸಾಮೂಹಿಕ ವರ್ಗಾವಣೆಯಂಥ ಕಿರುಕುಳ ನೀಡುತ್ತಿರುವುದು ನಿಜವೇ?

ಈ) ಕಛೇರಿ ಸ್ಥಳಾಂತರ ವಿಷಯ ನೆನೆಗುದಿಗೆ ಬೀಳಲು ಕಾರಣವೇನು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) ಇಲ್ಲ.

ಆ) ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ತತ್ವಶಃ ಒಪ್ಪಿದೆ.

ಇ) ಇಲ್ಲ.

ಈ) ಸ್ಥಳಾಂತರದ ರೂಪುರೇಷೆಗಳನ್ನು ನಿರ್ಧರಿಸುವ ವಿಷಯ ಪರಿಶೀಲಿಸಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿ ಕಬ್ಬಿನ ದರ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 174 (282)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಮೊದಲು ಪಡೆದ ಕಬ್ಬಿಗೆ ಒಂದು ದರ ನಂತರ ಪಡೆದ ಕಬ್ಬಿಗೆ ಮತ್ತೊಂದು ದರ ನೀಡಿ ರೈತರಿಗೆ ತಾರತಮ್ಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಭದ್ರಾವತಿ ಎಂ.ಪಿ.ಎಂ. ಸಕ್ಕರೆ ಕಾರ್ಖಾನೆ ಪ್ರಾರಂಭದ ಕಬ್ಬಿಗೆ ರೂ.710 ನಂತರದ ಕಬ್ಬಿಗೆ ರೂ.580 ನೀಡುತ್ತಿರುವುದು ರೈತರಿಗೆ ತಾರತಮ್ಯ ಆಗಿಲ್ಲವೆ.

ಇ) ಹಾಗಿದ್ದಲ್ಲಿ ರಾಜ್ಯದಲ್ಲಿ ಎಲ್ಲಾ ರೈತರಿಗೂ ಒಂದೇ ದರ ನೀಡುವಂತೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) ಬಂದಿದೆ.

ಆ) ಭದ್ರಾವತಿ ಎಂ.ಪಿ.ಎಂ. ಸಕ್ಕರೆ ಕಾರ್ಖಾನೆಯು 95-96ನೇ ಸಾಲಿನಲ್ಲಿ 24.4.96ರವರೆಗೆ ಟನ್‌ಗೆ ರೂ.710ರಂತೆ ಹಾಗೂ ನಂತರ ಸರಬರಾಜಾದ ಕಬ್ಬಿಗೆ ಇಳುವರಿ ಶೇ.8ಕ್ಕಿಂತ ಕಡಿಮೆಯಾದುದರಿಂದ ಸರ್ಕಾರ ನಿಗಧಿಗೊಳಿಸಿರುವ ಶೇ.8.5ರ ಇಳುವರಿ ಪ್ರಮಾಣಕ್ಕೆ ಪ್ರತಿ ಟನ್ನಿಗೆ ರೂ.580ರಂತೆ ಪಾವತಿಸಲು ಕಾರ್ಖಾನೆ ತೀರ್ಮಾನ ಕೈಗೊಂಡಿದೆ. ರೈತರ ಗಮನಕ್ಕೆ ತಂದು ಸಕ್ಕರೆ ಇಳುವರಿ ಕಡಿಮೆಯಾದ ಕಾರಣ ಕಾರ್ಖಾನೆ ಈ ಕ್ರಮವಿಟ್ಟಿದೆ.

ಇ) ರಾಜ್ಯ ಸರ್ಕಾರವು ಕಬ್ಬಿಗೆ ಶೇ.8.5 ಇಳುವರಿ ಆಧಾರ ಇಟ್ಟುಕೊಂಡು ರಾಜ್ಯ ಸಲಹಾ ಬೆಲೆಯನ್ನು ನಿಗದಿಪಡಿಸಿ ಅದರಂತೆ ಪಾವತಿಸಬೇಕೆಂದು ಸೂಚಿಸಿದೆ. ಸಕ್ಕರೆ ಕಾರ್ಖಾನೆಗಳು ಸರ್ಕಾರದ ಸೂಚನೆ ಮೇಲೆ ಹೆಚ್ಚುವರಿ ಕಬ್ಬಿನ ಸಮಸ್ಯೆ ಪರಿಹಾರಕ್ಕಾಗಿ ಕಬ್ಬು ಅರೆಯುವ ಅವಧಿಯನ್ನು ವಿಸ್ತರಿಸಿದ್ದರಿಂದ ಸಕ್ಕರೆ ಇಳುವರಿ ಕೆಲವು ಪ್ರಕರಣಗಳಲ್ಲಿ ಶೇ.5ರವರೆಗೆ ಇಳಿದಿದೆ. ಇದರಿಂದಾಗಿ ಕಾರ್ಖಾನೆಯ ದರ ವ್ಯತ್ಯಾಸ ಮೂಡಿದೆ. ರೈತರಿಗೆ ತೊಂದರೆಯಾಗಿರುವುದರಿಂದ ಸೂಕ್ತ ಬೆಲೆ ನೀಡಲು ಸೂಚಿಸಿದೆ.

ವಿಷಯ:- ಶಿವಮೊಗ್ಗ ದೇವಿ ಸಕ್ಕರೆ ಕಾರ್ಖಾನೆಯ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 175 (281)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿವಮೊಗ್ಗ ದೇವಿ ಸಕ್ಕರೆ ಕಾರ್ಖಾನೆ ಆಡಳಿತ ವರ್ಗ ರೈತರಿಂದ ಪಡೆದ ಕಬ್ಬಿಗೆ